## - 2 -

## ಸಭಾಪಂಗಡವಲ್ಲದ ಕ್ರೈಸ್ತತ್ವ -

# ಅದು ಸಾಧ್ಯವೋ?

ಈ ದಿನದ ಅನೇಕ ಬೋಧಕರು ಜನರಿಗೆ ಕ್ರೈಸ್ತರಾಗಲು ಮತ್ತು ಆಮೇಲೆ "ಅವರ ಆಯ್ಕೆಯ ಸಭೆಯನ್ನು ಸೇರಿಕೊಳ್ಳಲು" ಬೋಧಿಸುತ್ತಾರೆ. ಹೀಗೆ ಜನರು ಪ್ರತ್ಯೇಕವಾಗಿ ಹಾಗೂ ಸಭಾ ಪಂಗಡದೊಂದಿಗೆ ಸೇರಿಕೊಳ್ಳದೇ ಕ್ರೈಸ್ತರಾಗುತ್ತಾರೆ - ಒಬ್ಬನಿಗೆ ಕ್ರೈಸ್ತನಾಗಲು, ಹಾಗೂ ಕೇವಲ ಕ್ರೈಸ್ತನಾಗಲು ಎಲ್ಲಾ ಸಭಾಪಂಗಡತ್ವವಿಲ್ಲದೇ, ಸ್ವತಂತ್ರವಾಗಿ ಕ್ರೈಸ್ತನಾಗಲು ಸಾಧ್ಯವಿದೆ ಎಂದು ಅವರು ಒಪ್ಪಿಕೊಳ್ಳುತ್ತಾರೆ. ಆದುದರಿಂದ, ಯುಗದ ಪ್ರಸಿದ್ಧ ಬೋಧನೆಗನುಗುಣವಾಗಿ, ದೇವರ ಆರಾಧಕನಾಗುವ ಅಪೇಕ್ಷೆಯ ಭಾಗವಾಗಿ ಮಾಡತಕ್ಕ ಸಂಗತಿಯು ಒಬ್ಬ ಕ್ರೈಸ್ತನಾಗುವುದು ಎಂಬುದನ್ನು ಅವರು ಸಿದ್ಧಮಾಡಿ ತೋರಿಸಲ್ಪಡಬೇಕಾಗಿರುವದಿಲ್ಲ.

ಈ ಪ್ರಸಿದ್ಧ ಬೋಧನೆಯ ಪ್ರಕಾರ, ಜನರು ಮೊದಲು ಕ್ರೈಸ್ತರಾಗುವರು ಅಷ್ಟೇ ಅಲ್ಲ, ಒಂದು ಸಭಾಪಂಗಡವನ್ನು ಪ್ರವೇಶಿಸುವ ಮೊದಲು ಯೇಸುವಿನ ರಕ್ತದಿಂದ ರಕ್ಷಿಸಲ್ಪಡುವರು, ಕೊಂಡುಕೊಳ್ಳಲ್ಪಡುವರು, ವಿಮೋಚಿಸಲ್ಪಡುವರು, ಹಾಗೂ ಕ್ರಮದಿಂದ, ದೇವರ ಕುರಿಮರಿಯ ಅಮೂಲ್ಯ ರಕ್ತದಿಂದ ಕೊಂಡುಕೊಳ್ಳಲ್ಪಡುವರು ಎಂಬುದನ್ನು ನಾನು ರುಜುವಾತು ಪಡಿಸಬೇಕಾಗಿರುವದಿಲ್ಲ. ಇವೆಲ್ಲವೂ ಒಪ್ಪಿಕೊಂಡ ಸಂಗತಿಗಳಾಗಿವೆ. ಈ ದೇಶದಲ್ಲಿಯ ಯಾವುದೇ ಸಭಾಪಂಗಡವು ತನ್ನ ಅನ್ಯೋನ್ಯ ತೆಯೊಳಗೆ ಒಬ್ಬನನ್ನು ಅವನು ಕ್ರೈಸ್ತನಾಗಿದ್ದಾನೆ, ಅವನು ರಕ್ಷಿಸಲ್ಪಟ್ಟಿದ್ದಾನೆ, ಎಂದು ನಂಬುವವರೆಗೆ ಸೇರಿಸಿಕೊಳ್ಳುವದೇ ಇಲ್ಲ. ಅದರ ಮಹತ್ವವನ್ನು ಒತ್ತಿ ಹೇಳುತ್ತ ವಿವಿಧ ಧಾರ್ಮಿಕ ಗುಂಪುಗಳು ಈ ವಿಷಯದಲ್ಲಿ ಜಾಗರೂಕತೆಯ ಕಾರ್ಯವನ್ನು ಕೇಳುತ್ತವೆ. ಈಗ ಈ ಬೋಧಕರು ಜನರಿಗೆ ಅವರು ಹೇಗೆ ಕ್ರೈಸ್ತರಾಗಬೇಕು ಎಂಬುದನ್ನು ಹೇಳುವರೋ ಇಲ್ಲವೇ ಎಂಬುದನ್ನು ಬದಿಗಿಟ್ಟು, ದೇವರ ಮಕ್ಕಳು, ಕ್ರೈಸ್ತರು ಸಭಾಪಂಗಡತ್ವದವರಾಗುವ ಮೊದಲು ಎಲ್ಲರೂ ರಕ್ಷಿಸಲ್ಪಡಬೇಕು ಎಂಬುದು ಒಪ್ಪಿಕೊಳ್ಳಲ್ಪಟ್ಟಿದೆ. ಈ ಒಪ್ಪಿಕೊಂಡ ಸಂಗತಿಯು ಈ ಚರ್ಚೆಯಲ್ಲಿ ಬೆಲೆಯು ಳ್ಳದ್ದಾಗಿದೆ; ಇದು ನಮಗೆ ಒಂದು ಪ್ರಾರಂಭವನ್ನು ಕೊಡುತ್ತದೆ.

ಒಬ್ಬನು ಕ್ರಿಸ್ತನ ಬಗ್ಗೆ ಕೇಳಬಹುದು, ಕ್ರಿಸ್ತನ ಬಳಿಗೆ, ಆತನ ರಕ್ತದ ಬಳಿಗೆ ಸಹ ಬರಬಹುದು, ರಕ್ಷಿಸಲ್ಪಡಬಹುದು, ತನ್ನ ಮೇಲೆ ಸಭಾಪಂಗಡತ್ವದ ಒಂದು ಕಲೆಯಿಲ್ಲದೆ ಕುರಿಮರಿಯಾದಾತನ ಜೀವಬಾಧ್ಯರ ಪುಸ್ತಕದಲ್ಲಿ ಅವನ ಹೆಸರು ದಾಖಲಿಸಲ್ಪಡಬಹುದು ಎಂದು ಒಪ್ಪಿಕೊಳ್ಳಲ್ಪಡುವುದು ಬಹಳವನ್ನು ಒಪ್ಪಿ ಕೊಳ್ಳುವುದಾಗಿದೆ. ದೇವರನ್ನು ಮೆಚ್ಚಿಸಲು ಬಯಸುವವನಿಗೆ ಈ ಎಲ್ಲಾ ಸಭಾಪಂಗಡತ್ವವು ಹೇಗೆ ಅಸ್ತಿತ್ವದಲ್ಲಿದೆ ಎಂದು ಆಶ್ಚರ್ಯಪಡಲಿಕ್ಕೆ ಕಾರಣವಾಗಲು ಸಾಕಷ್ಟಾಗಿದೆ. ಆಗ ಚರ್ಚಿಸಲ್ಪಡಬೇಕಾದ ಪ್ರಶ್ನೆಯು ಈ ರಕ್ಷಿಸಲ್ಪಟ್ಟ ಮನುಷ್ಯನು, ದೇವರ ಮಗನು, ಈ ಕ್ರೈಸ್ತನು ಒಂದು ಸಭೆಗೆ ಸೇರಲು, ಸಭೆಯ ಸದಸ್ಯತ್ವವಿರಲು, ಸಭೆಯಲ್ಲಿ ಕ್ರಮವಾಗಿ ಭಾಗವಹಿಸುವವನಾಗಿರಲು ಒಂದು ಸಭಾಪಂಗಡವನ್ನು

ಸೇರಬೇಕೋ ಎಂಬುದು.

ಪಂಚಾಶತ್ತಮದ ದಿನದಂದು ಶಿಷ್ಯರ ಸಂಖ್ಯೆಗೆ ಕೂಡಿಸಲ್ಪಟ್ಟ ಮೂರು ಸಾವಿರ ಜನರು ರಕ್ಷಿಸಲ್ಪಟ್ಟವರಾಗಿದ್ದರು, ಕ್ರೈಸ್ತರಾಗಿದ್ದರು ಎಂಬುದರಲ್ಲಿ ಸಂಶಯವಿರುವದಿಲ್ಲ, ಯಾಕಂದರೆ, "... ರಕ್ಷಿಸಲ್ಪಡುತ್ತಾ ಇದ್ದವರನ್ನು ದಿನದಿನವೂ ಕರ್ತನು ಅವರಿಗೆ ಕೂಡಿಸಿದನು" (ಅಪೊಸ್ತಲರ ಕೃತ್ಯಗಳು 2:47ಬಿ) ಎಂದು ಹೇಳಲ್ಪಟ್ಟಿದೆ. ಈ ಶಿಷ್ಯರು "ಒಟ್ಟಾಗಿದ್ದರು" ಮತ್ತು ಅವರು "ಏಕಮನಸ್ಸಿನಿಂದ ದೇವಾಲಯದಲ್ಲಿ ಕೂಡುತ್ತಾ ... ದೇವರನ್ನು ಕೊಂಡಾಡುವವರಾಗಿಯೂ ..." ಇದ್ದರು (ಅಪೊಸ್ತಲರ ಕೃತ್ಯಗಳು 2:46, 47ಎ) ಎಂಬುದನ್ನು ಅಲ್ಲಗಳೆಯಲಾಗುವದಿಲ್ಲ. ಈ ಜನರು ದೇವಾಲಯದಲ್ಲಿ "ಒಂದಾಗಿ ಕೂಡಿ ಬಂದು" "ದೇವರ ಸ್ತೋತ್ರ ಮಾಡುತ್ತಾ" ಒಂದು ಸಭೆಯಾಗಿದ್ದರು, "ಸಭೆಯ ಸಾಮರ್ಥ್ಯದಲ್ಲಿ" ಕಾರ್ಯಮಾಡುತ್ತ ಈ ಎಲ್ಲಾ ಶಿಷ್ಯರು ಸಭೆಗೆ ಸೇರಿದವರಾಗಿದ್ದರು ಎಂಬುದು ಅಲ್ಲಗಳೆಯಲ್ಪಡುವದಿಲ್ಲ. ನಿಶ್ಚಯವಾಗಿರಲು, ಈ ಜನರ ಚರಿತ್ರೆಯನ್ನು ಅನುಸರಿಸಬಹುದು ಮತ್ತು ಅವರ ಇಬ್ಬರು ಪ್ರಸಂಗಿಗಳನ್ನು, ಪೇತ್ರ ಮತ್ತು ಯೋಹಾನರನ್ನು, ಆತನ ಹೆಸರಿನಲ್ಲಿ ಪ್ರಸಂಗಿಸಿದ್ದಕ್ಕಾಗಿ ಸೆರೆಮನೆಯಲ್ಲಿ ಹಾಕಲ್ಪಟ್ಟಿದ್ದನ್ನು ಕಂಡುಕೊಳ್ಳಬಹುದು; ಆದರೆ ವಿಚಾರಣೆ ಮಾಡಿದ ನಂತರ, "ತಮ್ಮ ಜನರ ಬಳಿಗೆ" ಹೋಗಲು ಅವರು ಅಪ್ಪಣೆ ಹೊಂದಿದರು (ಅಪೊಸ್ತಲರ ಕೃತ್ಯಗಳು 4:23). ಆ ಗುಂಪಿಗೆ ಕೈದಿಗಳಂತೆ ತಮ್ಮ ಅನುಭವವನ್ನು ಅವರು ವರದಿಮಾಡಿದರು, ಆಗ ಆ ಗುಂಪು, ಇದನ್ನು "ಕೇಳಿ ಏಕ ಮನಸ್ಸಿನಿಂದ ದೇವರನ್ನು ಘಟ್ಟಿಯಾದ ಧ್ವನಿಯಿಂದ ಹೀಗೆ ಪ್ರಾರ್ಥಿಸಿದರು" (ಅಪೊಸ್ತಲರ ಕೃತ್ಯಗಳು 4:24); "ಹೀಗೆ ಪ್ರಾರ್ಥನೆ ಮಾಡಿದ ಮೇಲೆ ಅವರು ಕೂಡಿದ್ದ ಸ್ಥಳವು ನಡುಗಿತು ... ದೇವರ ವಾಕ್ಯವನ್ನು ಧೈರ್ಯದಿಂದ ಹೇಳುವವರಾದರು" (ಅಪೊಸ್ತಲರ ಕೃತ್ಯಗಳು 4:31). ಆದುದರಿಂದ - ಈ ಜನರು - ರಕ್ಷಿಸಲ್ಪಟ್ಟ ಜನರು - ಒಂದಾಗಿ ಕೂಡಿಬರುತ್ತಿದ್ದರು ಮತ್ತು ಕೂಡಿಬಂದ ಸಾಮರ್ಥ್ಯದಲ್ಲಿ ದೇವರನ್ನು ಆರಾಧಿಸುತ್ತಿದ್ದರು ಆತನನ್ನು ಕೊಂಡಾಡುತ್ತಿದ್ದರು ಮತ್ತು ಆತನಿಗೆ ಪ್ರಾರ್ಥಿಸುತ್ತಿದ್ದರು. ಅಂಥ ಕೂಟಗಳನ್ನು "ಸಭೆಯ ಕೂಟಗಳು" ಎಂದು ಕರೆಯುವದರಲ್ಲಿ ತಪ್ಪಾಗಿರುತ್ತೇವೆಯೋ? ಈ ರಕ್ಷಿಸಲ್ಪಟ್ಟ ಜನರು ಹೀಗೆ ಕೂಡಿಬರುತ್ತಾ ಮತ್ತು "ಒಂದಾಗಿ ಆರಾಧಿಸುತ್ತ" ಒಂದು "ಸಭೆಯಾಗಿ" ರಚಿಸಲ್ಪಟ್ಟಿದ್ದರು ಮತ್ತು ಅವರು "ಸಭೆಯ ಸಾಮರ್ಥ್ಯದಲ್ಲಿ" ಕೂಡಿ ಬರುತ್ತಿದ್ದರು, ಆರಾಧಿಸುತ್ತಿದ್ದರು ಎಂದು ಹೇಳುವುದು ತಪ್ಪಾಗಿರುವುದೋ? ನಾವು ಬಹಳ ಅವಸರದಿಂದ ಹೋಗಿ ಅತಿಶಯವಾದದ್ದನ್ನು ನಿರ್ಣಯಿಸದಂತೆ, ನಾವು ಪುನಃ ದಾಖಲೆಗಳಿಗೆ ಮನವಿ ಮಾಡಿಕೊಳ್ಳುತ್ತೇವೆ. ಪರಿಶುದ್ಧಾತ್ಮನು ಈ ಜನರನ್ನು ಒಂದು "ಸಭೆ" ಎಂದು ಕರೆದಿದ್ದರೆ, ಆಗ ನಾವು ತೃಪ್ತರಾಗುತ್ತೇವೆ.

> ಆ ದಿವಸಗಳಲ್ಲಿ ಶಿಷ್ಯರು ಹೆಚ್ಚುತ್ತಾ ಬರಲಾಗಿ ಅವರೊಳಗೆ ಗ್ರೀಕ್ ಭಾಷೆಯವರು ಇಬ್ರಿಯ ಭಾಷೆಯವರ ಮೇಲೆ - ದಿನದಿನದ ಉಪಚಾರದಲ್ಲಿ ನಮ್ಮ ವಿಧವೆಯರನ್ನು ಸರಿಯಾಗಿ ಪರಾಂಬರಿಸುವದಿಲ್ಲವೆಂದು ಗುಣಗುಟ್ಟಿದರು. ಆಗ ಹನ್ನೆರಡು ಮಂದಿ ಅಪೊಸ್ತಲರು ಶಿಷ್ಯಮಂಡಲಿಯನ್ನು ಕೂಡಿಸಿ - ನಾವು ದೇವರ ವಾಕ್ಯೋಪದೇಶವನ್ನು ಬಿಟ್ಟು ಉಪಚಾರ ಮಾಡುತ್ತಿರುವದು ತಕ್ಕದ್ದಲ್ಲವಲ್ಲಾ; ಆದದರಿಂದ ಸಹೋದರರೇ, ಸಂಭಾವಿತರೂ ಪರಿಶುದ್ಧಾತ್ಮ ಭರಿತರೂ ಜ್ಞಾನಸಂಪನ್ನರೂ ಆಗಿರುವ ಏಳು ಮಂದಿಯನ್ನು ನಿಮ್ಮೊಳಗಿಂದ ನೋಡಿ ಆರಿಸಿಕೊಳ್ಳಿರಿ; ಅವರನ್ನು ಈ ಕೆಲಸದ ಮೇಲೆ ನೇಮಿಸುವೆವು ... (ಅಪೊಸ್ತಲರ ಕೃತ್ಯಗಳು 6:1-5).

ಅವರು ಜನರನ್ನು ಆಯ್ಕೆ ಮಾಡಿದರು ಮತ್ತು ಅಪೊಸ್ತಲರು ಅವರನ್ನು "ಈ ಕೆಲಸದ ಮೇಲೆ" ನೇಮಿಸಿದರು. ಹೀಗೆ ಈ ಜನರು ಯೆರೂಸಲೇಮಿನಲ್ಲಿ ಪುನಃ ಕೂಡಿಬರುವದನ್ನು ನಾವು ಕಂಡುಕೊಳ್ಳುತ್ತೇವೆ. ಈ ಕೂಡಿಬಂದ ಸಾಮರ್ಥ್ಯದಲ್ಲಿ, ಅವರು ಆಯ್ಕೆ ಮಾಡುವ ಮತ್ತು ಕೆಲವೊಂದು ಕೆಲಸಕ್ಕಾಗಿ ಕೆಲಸದವರನ್ನು ನೇಮಿಸುವ ಕಾರ್ಯದಲ್ಲಿ ಅವರು ಇದ್ದರು. ("ಸಭೆಯ ಕೆಲಸ" ಎಂದು ನಾನು ಹೇಳಬಹುದೋ?) "ಮತ್ತು ದೇವರ ವಾಕ್ಯವು ಪ್ರಬಲವಾಯಿತು. ಶಿಷ್ಯರ ಸಂಖ್ಯೆಯು ಯೆರೂಸಲೇಮಿನಲ್ಲಿ ಬಹಳವಾಗಿ ಹೆಚ್ಚುತ್ತಾ ಬಂತು. ಯಾಜಕರಲ್ಲಿಯೂ ಬಹು ಜನರು ಕ್ರಿಸ್ತನಂಬಿಕೆಗೆ ಒಳಗಾಗುತ್ತಾ ಇದ್ದರು" (ಅಪೊಸ್ತಲರ ಕೃತ್ಯಗಳು 6:7).

ಯೆರೂಸಲೇಮಿನಲ್ಲಿ ಶಿಷ್ಯರ ಸಂಖ್ಯೆಯು ಬೆಳೆಯುತ್ತಲೇ ಇತ್ತು. ಧಾರ್ಮಿಕ ಸೇವೆಗಳಲ್ಲಿ - ಪ್ರಾರ್ಥಿಸುವದರಲ್ಲಿ, ಸ್ತೋತ್ರ ಮಾಡುವದರಲ್ಲಿ, ಹಾಗೂ ಪಾಪಿಗಳನ್ನು ರಕ್ಷಿಸುವದರಲ್ಲಿ ಅಷ್ಟು ಚುರುಕಾಗಿ ತೊಡಗಿದ್ದ ಈ ಗುಂಪು ಏನಾಗಿತ್ತು? ಅದನ್ನು ಒಂದು ಸಭೆ ಎಂದು ಕರೆಯಲು ನಾವು ಸಿದ್ಧರಾಗಿರುವೆವೋ? ನಾವು ನಿಜವಾಗಿಯೂ ಕರ್ತನ ಶಿಷ್ಯರನ್ನು ರಕ್ಷಿಸಲ್ಪಟ್ಟ ಜನರನ್ನು, ಒಂದು "ಸಭೆಯ ಸಾಮರ್ಥ್ಯದಲ್ಲಿ" ಕರ್ತನ ಶಿಷ್ಯರಂತೆ - ಕೆಲಸ ಮಾಡುವ ಮತ್ತು ಆರಾಧಿಸುವಂಥವರನ್ನು ಹಾಗೂ ಅವರಿಗೆ ಅನುದಿನವೂ ಇತರ ರಕ್ಷಿಸಲ್ಪಟ್ಟ ಜನರು ಕೂಡಿಸಲ್ಪಡುವದನ್ನು ಕಂಡು ಕೊಂಡಿದ್ದೇವೆ ಎಂದು ಹೇಳಬಹುದೋ? ಎಲ್ಲಾ ಸುರಕ್ಷಿತತೆಯಲ್ಲಿ ಈ ಜನರನ್ನು ಒಂದು ಸಭೆ ಎಂದು ಕರೆಯಬಹುದೆಂದು ಭಾವಿಸುವಾಗಲೂ, ಪರಿಶುದ್ಧಾತ್ಮನು ಅವರನ್ನು ಹಾಗೆ ಕರೆಯುವದನ್ನು ಕಂಡುಕೊಳ್ಳುವಾಗ ನಾವು ಇನ್ನೂ ಹೆಚ್ಚು ಸುರಕ್ಷಿತವಾದ ಭಾವನೆ ಹೊಂದುತ್ತೇವೆ: "ಆ ದಿವಸದಲ್ಲಿ ಯೆರೂಸಲೇಮಿನಲ್ಲಿದ್ದ ಸಭೆಗೆ ದೊಡ್ಡ ಹಿಂಸೆ ಉಂಟಾಯಿತು" (ಅಪೊಸ್ತಲರ ಕೃತ್ಯಗಳು 8:1ಬಿ).

ನಿಜವಾಗಿಯೂ ಇದೇ ಜನರು - ಪ್ರಾರ್ಥನೆಗಾಗಿ ಮತ್ತು ಸ್ತೋತ್ರ ಮಾಡುವದಕ್ಕಾಗಿ, ಸುವಾರ್ತೆಯನ್ನು ಸಾರುವದಕ್ಕಾಗಿ ಮತ್ತು ಬಡವರ ಜೋಪಾಸನೆ ಮಾಡಲು ಜನರನ್ನು ಆಯ್ದುಕೊಳ್ಳುವದಕ್ಕಾಗಿ ಒಂದಾಗಿ ಕೂಡಿ ಬರುವದನ್ನು ನಾವು ನೋಡಿದ ಇದೇ ಶಿಷ್ಯರು, ಪರಿಶುದ್ಧಾತ್ಮನಿಂದಲೇ, "ಯೆರೂಸಲೇಮಿನಲ್ಲಿ ಇದ್ದ ಸಭೆ" ಎಂದು ಕರೆಯಲ್ಪಟ್ಟಿದ್ದಾರೆ (ಅಪೊಸ್ತಲರ ಕೃತ್ಯಗಳು 8:1; 11:22). ನಿಶ್ಚಯವಾಗಿಯೂ ಅಷ್ಟು ಸಾಕಾಗುತ್ತದೆ. ಯೆರೂಸಲೇಮಿನಲ್ಲಿ ರಕ್ಷಿಸಲ್ಪಟ್ಟ ಪ್ರತಿಯೊಬ್ಬನು ಸಭೆಯ ಸದಸ್ಯನಾಗಿದ್ದನು, ಆದಾಗ್ಯೂ ಯೆರೂಸಲೇಮಿನಲ್ಲಿದ್ದ ಸಭೆಯು ಒಂದು ಸಭಾಪಂಗಡವಾಗಿತ್ತೆಂದು ಹೇಳಲಿಕ್ಕಾಗುವದಿಲ್ಲ. ಯೆರೂಸಲೇಮಿನಲ್ಲಿದ್ದ ಈ ಸಭೆ, ಪಟ್ಟಣದಲ್ಲಿಯ ರಕ್ಷಿಸಲ್ಪಟ್ಟ ಪ್ರತಿಯೊಬ್ಬನನ್ನು ಒಳಗೊಂಡು ದೇವರ ಸಭೆಯಾಗಿತ್ತು ಎಂಬುದನ್ನು ಪ್ರತಿಯೊಂದು ಸಭಾಪಂಗಡವು ಒಪ್ಪಿಕೊಳ್ಳುತ್ತದೆ. ಆದುದರಿಂದ, ಈ ಶಿಷ್ಯರು - ಈ ಕ್ರೈಸ್ತರು, ಈ ರಕ್ಷಿಸಲ್ಪಟ್ಟ ಜನರು - ಕ್ರಿಸ್ತನ ಶಿಷ್ಯರಾಗಿ, ಕ್ರೈಸ್ತರಾಗಿ, ಒಂದು ಸಭಾಪಂಗಡ ಬಗ್ಗೆ ಎಂದೂ ಕೇಳದವರಾಗಿ, ಜೀವಿಸಿದರು ಮತ್ತು ಸತ್ತು ಹೋದರು.

ಸತ್ಯವಾಗಿಯೂ, ಶುದ್ಧ ಕ್ರೈಸ್ತತ್ವವೆಂದು ಲೋಕವೆಲ್ಲಾ ಒಪ್ಪಿಕೊಳ್ಳುವಂಥ, ಸಭಾಪಂಗಡವಲ್ಲದ ಕ್ರೈಸ್ತತ್ವವನ್ನು ನಾವು ಕಂಡುಕೊಂಡಿದ್ದೇವೆ. ಅದರೊಂದಿಗೆ ಸಹ, ಒಂದೇ ಹೃದಯ ಮತ್ತು ಒಂದೇ ಪ್ರಾಣವುಳ್ಳ ದೇವರ ಜನರನ್ನು ಕಂಡುಕೊಂಡಿದ್ದೇವೆ; ಅವರಲ್ಲಿ ಭೇದಗಳಿರಲಿಲ್ಲ, ಆದರೆ ಒಂದೇ ಮನಸ್ಸೂ ಒಂದೇ ಅಭಿಪ್ರಾಯವೂ ಉಳ್ಳವರಾಗಿ, ಒಂದಾಗಿ ಪರಿಪೂರ್ಣವಾಗಿದ್ದರು (1 ಕೊರಿಂಥ 1:10). ಎಲ್ಲಾ ವಿಶ್ವಾಸಿಗಳೂ ಒಂದಾಗಿರ ಬೇಕೆಂಬುದು ನಮ್ಮ ರಕ್ಷಕನ ಪರಿಶುದ್ಧ ಪ್ರಾರ್ಥನೆಯಾಗಿತ್ತು (ಯೋಹಾನ 17:20, 21). ಇಲ್ಲಿ ಅದು ನಿಜವಾಗಿಯೂ ಉತ್ತರಿಸಲ್ಪಟ್ಟಿತು. ಸಭಾಪಂಗಡತ್ವದೊಂದಿಗೆ, ಎಷ್ಟು

ಭೇದಗಳು ನಿಂತುಹೋಗುವವು - ಮತ್ತು ನಮ್ಮ ಒಡೆಯನ ಎಷ್ಟು ಪ್ರಾರ್ಥನೆಗಳು ಉತ್ತರಿಸಲ್ಪಡುವವು?

---

## ಪಾಪಗಳ ಪರಿಹಾರಕ್ಕಾಗಿ ಬಾಪ್ತಿಸ್ಮ ಹೊಂದುವುದು

"ಪೇತ್ರನು ಅವರಿಗೆ - ನಿಮ್ಮ ಪಾಪಗಳು ಪರಿಹಾರವಾಗುವದಕ್ಕಾಗಿ ನಿಮ್ಮಲ್ಲಿ ಪ್ರತಿಯೊಬ್ಬರು ದೇವರ ಕಡೆಗೆ ತಿರುಗಿಕೊಂಡು ಯೇಸು ಕ್ರಿಸ್ತನ ಹೆಸರಿನ ಮೇಲೆ ಬಾಪ್ತಿಸ್ಮಮಾಡಿಸಿಕೊಳ್ಳಿರಿ, ಆಗ ನೀವು ಪರಿಶುದ್ಧಾತ್ಮ ದಾನವನ್ನು ಹೊಂದುವಿರಿ" ಎಂದು ಹೇಳಿದನು (ಅಪೊಸ್ತಲರ ಕೃತ್ಯಗಳು 2:38).

© 2009 Truth for Today